ಗುಲ್ಬರ್ಗಾ ವಿಭಾಗ

ವರ್ಷ	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ	ಅಳಂದ	ಚಿನ್ಮೋಲಿ	ಜೇವರ್ಗಿ	ಒಟ್ಟು
	1	2	3	4	5	6	
ನವೆಂಬರ್ 97ರಿಂದ ಮಾರ್ಚ್ 98	02	22	02	0	0	0	26
1998–99	12	29	12	6	0	0	59
1999–00	08	11	09	08	0	0	36
2000–01	19	14	06	10	09	0	58
2001–02	07	11	12	03	02	0	35
2002–03	06	13	04	03	0	0	26
2003–04	06	10	01	04	04	0	25
2004–05	0	0	0	0	0	05	05
ಒಟ್ಟು	60	110	46	34	15	05	270

ಯಾದಗಿರಿ ವಿಭಾಗ

ವರ್ಷ	ಯಾದಗಿರಿ	ಶಹಾಪುರ	ಚಿತ್ತಾಪುರ	ಒಟ್ಟು
ನವೆಂಬರ್ 97ರಿಂದ ಮಾರ್ಚ್ 98	04	04	13	21
1998–99	13	06	03	22
1999–00	06	05	Nil	11
2000–01	12	13	08	33
2001–02	0	01	01	02
2002–03	09	5	03	27
2003–04	04	08	6	18
2004–05	Nil	Nil	Nil	0.7
ಒಟ್ಟು	48	52	34	141

382 (684) ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ): ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ತಾಪುರ ಮತ ಕ್ಷೇತ್ರದಲ್ಲಿ ಬರುವ ಬಾಜಿಕೊಟ್ಟನೂರ್, ಕರದಾಳ್, ಮಾವಿನ ಸೂರ್, ಅರಳಿಕಲ್, ಮುಕ್ತಾ, ಮುಗಳ್‌ನಗ, ಪಾಳ, ಕುಮಸಿ, ಹೀಗೆ ಇಲ್ಲಿರುವ ಸಣ್ಣ ನೀರಾವರಿ ಕೆರೆಗಳಿಗೆ ಕಾಲುವೆಗಳು ಇರದೆ ನೀರು ಇದ್ದರೂ ಕೂಡ ರೈತರ ಜಮೀನಿನ ನೀರು ಕೊಡಲು ಸಾಧ್ಯವಾಗದಿರುವುದು ನಿಜವೇ? ಹಾಗಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಚಿತ್ತಾಪುರ ಮತಕ್ಷೇತ್ರದಲ್ಲಿ ಬರುವ ಈ ಎಲ್ಲಾ ಕೆರೆಗಳಿಗೆ ಕಾಲುವೆಗಳು ಇರುತ್ತವೆ. ಕಳೆದ ಸಾಲಿನ ಮಳೆಗಾಲದಲ್ಲಿ ಅಲ್ಪ ಪ್ರಮಾಣದ ಮಳೆ ಬಂದಿರುವುದರಿಂದ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಕೆರೆಯಲ್ಲಿ ನೀರು ತುಂಬಿರುತ್ತದೆ. 2005ರ ಮಳೆಗಾಲದ ತನಕ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಅವಶ್ಯಕತೆ ಇರುವುದರಿಂದ, ಕೆರೆಯಿಂದ ರೈತರ ಜಮೀನಿಗೆ ನೀರು ಕೊಡಲು ಸಾಧ್ಯವಾಗಿರುವುದಿಲ್ಲ.

383 (137) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಚಿತ್ತಾಪುರ): ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಸ್ತೆ ಸಾರಿಗೆ ನಿಗಮಗಳು ಯಾವುವು;

ಆ) ಈ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಹಾನಿ ಮತ್ತು ಲಾಭ ಕಳೆದ ಮೂರು ವರ್ಷಗಳಲ್ಲಿ ಎಷ್ಟು;

ಇ) 31.3.03, 31.3.04ಕ್ಕೆ ಇವುಗಳ ಒಟ್ಟು ಲಾಭ ಮತ್ತು ಹಾನಿ ಎಷ್ಟು?

ಈ) ಈ ನಿಗಮಗಳ ವ್ಯಾಪ್ತಿಯಲ್ಲಿ ಎಷ್ಟು ಕಂಪನಿ ಅಥವಾ ಜನರಿಗೆ ಬಸ್ಸುಗಳನ್ನು ಓಡಿಸಲು ಸಾರಿಗೆ ಸಂಸ್ಥೆಯ ಎಷ್ಟು ಮಾರ್ಗಗಳನ್ನು ಕೊಡಲಾಗಿದೆ.

ಉ) ಯಾರಾರಿಗೆ ಕೊಡಲಾಗಿದೆ ಹಾಗೂ ಅವುಗಳ ಕರಾರು ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) 1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ.

2) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.

3) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

4) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

ಆ) ಸಂಸ್ಥೆಗಳ ಲಾಭ ಮತ್ತು ನಷ್ಟದ ವಿವರ ಈ ಕೆಳಗಿನಂತಿದೆ:

(ರೂ.ಲಕ್ಷಗಳಲ್ಲಿ)

ಸಂಸ್ಥೆಯ ಹೆಸರು	ಲಾಭ ಮತ್ತು ನಷ್ಟ					
	2001–02		2002–03		2003–04	
	ನಷ್ಟ	ಲಾಭ	ನಷ್ಟ	ಲಾಭ	ನಷ್ಟ	ಲಾಭ
ಕ.ರಾ.ರ.ಸಾ.ಸಂ.	–	1652.00	–	3274.00	–	2587.00
ಬೆಂ.ಮ.ಸಾ.ಸಂ.	–	2670.00	–	2764.00	–	7739.00
ವಾ.ಕ.ರಿ.ಸಾ.ಸಂ.	–	1171.54	–	1228.15	968.98	–
ಈ.ಕ.ರ.ಸಾ.ಸಂ.	1818.70	–	1498.08	–	1290.34	–